722 (538) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು) – ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರ ಮತಕ್ಷೇತ್ರದಲ್ಲಿ ಇರುವ ಒಟ್ಟು ನ್ಯಾಯ ಬೆಲೆ ಅಂಗಡಿಗಳೆಷ್ಟು ;

ಆ) ಇದರಲ್ಲಿ ನ್ಯಾಯ ಬೆಲೆಯಲ್ಲಿ ವಿತರಿಸಲಾಗುವ ವಿವಿಧ ಬಗೆಯ ಪಡಿತರವೆಷ್ಟು ;

ಇ) ಕಿತ್ತೂರ ಕ್ಷೇತ್ರಕ್ಕೆ ಹೊಸದಾಗಿ ಎಷ್ಟು ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಕಿತ್ತೂರು ಮತಕ್ಷೇತ್ರದಲ್ಲಿ 76 ನ್ಯಾಯಬೆಲೆ ಅಂಗಡಿಗಳು ಇರುತ್ತವೆ.

ಆ) ಕಿತ್ತೂರು ಮತ ಕ್ಷೇತ್ರದ ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಿಸುವ ಪಡಿತರ ವಿವರಗಳು ಕೆಳಕಂಡಂತ್ತಿರುತ್ತದೆ.

(ಕ್ವಿಂ.ಗಳಲ್ಲಿ)

ಪಡಿತರ ಚೀಟಿಗಳ ವಿಧ	ಅಕ್ಕಿ (ಕ್ವಿಂ. ಗಳಲ್ಲಿ)	ಗೋಧಿ (ಕ್ವಿಂ. ಗಳಲ್ಲಿ)	ಸಕ್ಕರೆ (ಕ್ವಿಂ. ಗಳಲ್ಲಿ)	ಸೀಮೆ ಎಣ್ಣೆ (ಲೀಟರ್ ಗಳಲ್ಲಿ)
ಅಂತ್ಯೋದಯ	1522.08	380.52	54.36	21744
ಬಿಪಿಎಲ್	5153.20	1288.30	257.66	103064
ಎಪಿಎಲ್	–	–	–	6800
ಒಟ್ಟು	6675.28	1668.82	312.02	131608

ಇ) ಕಿತ್ತೂರು ಮತಕ್ಷೇತ್ರದಲ್ಲಿ ಪಡಿತರ ಚೀಟಿದಾರರಿಗೆ ಅನುಗುಣವಾಗಿ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಉದ್ದೇಶಿಸಲಾಗಿದೆ. 5 ಗ್ರಾಮಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಅಧಿಸೂಚನೆಯನ್ನು ಹೊರಡಿಸಲಾಗಿದೆ.

723 (981) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?